# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 554 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಲೀಂ ಅಹ್ಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) |
| ಉತ್ತರಿಸಬೇಕಾದ ದಿನಾಂಕ | 20-02-2023 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಎಷ್ಟು ಮಕ್ಕಳ ಸ್ನೇಹಿ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ: | ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಕಿಶೋರಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ ರಾಜ್ಯದ 16 ಜಿಲ್ಲೆಗಳಲ್ಲಿ "ಹದಿಹರೆಯದಮಕ್ಕಳ ಸ್ನೇಹಪರ ಕ್ಲಿನಿಕ್"ಗಳನ್ನು **"ಸ್ನೇಹಕ್ಲಿನಿಕ್"**ಎಂದು ಅನುಷ್ಠಾನಗೊಳಿಸಲಾಗಿದ್ದು, ಒಟ್ಟು 517 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. |
| ಆ | ಸರ್ಕಾರವು ಎಷ್ಟು ಆಸ್ಪತ್ರೆಗಳನ್ನು ಮಕ್ಕಳ ಸ್ನೇಹಿ ಎಂದು ಗುರುತಿಸಲಾಗಿದೆ: | ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ ಒಟ್ಟು 517 ಕೇಂದ್ರಗಳನ್ನು**"ಸ್ನೇಹಕ್ಲಿನಿಕ್"** ಎಂದು ಗುರುತಿಸಲಾಗಿರುತ್ತದೆ. |
| ಇ | ಮಕ್ಕಳ ಸ್ನೇಹಿ ಆಸ್ಪತ್ರೆಗಳನ್ನು ಎಲ್ಲೆಡೆ ಜಾರಿ ಮಾಡಲು ಸರ್ಕಾರ ಈ ವರ್ಷದ ಆಯವ್ಯಯದಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ಮತ್ತು ಅದರ ಪ್ರಗತಿಯನ್ನು ವಿವರಿಸುವುದು: | ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿನ "ಸ್ನೇಹಾ ಕ್ಲಿನಿಕ್" ಅನುಷ್ಠಾನ ಚಟುವಟಿಕೆಗಳಿಗಾಗಿ ಭಾರತ ಸರ್ಕಾರದ NHM-RoP ಅಡಿಯಲ್ಲಿ 2022-23ನೇ ಸಾಲಿಗೆ ಒಟ್ಟು ರೂ.29.60 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಡಿಸೆಂಬರ್-22ರ ಅಂತ್ಯದವರೆಗೆ ರೂ.17.45 ಲಕ್ಷಗಳ ಅನುದಾನವು ಬಳಕೆಯಾಗಿರುತ್ತದೆ. |
| ಈ | ಮಕ್ಕಳ ಸ್ನೇಹಿ ಆಸ್ಪತ್ರೆಗಳಿಂದ ಆಗಿರುವ ಪ್ರಗತಿಯ ಬದಲಾವಣೆಗಳೇನು ? (ವಿವರವಾದ ಮಾಹಿತಿ ನೀಡುವುದು) | 2022-23ನೇ ಸಾಲಿನಲ್ಲಿ (ಜನವರಿ-23ರವರೆಗೆ) ಒಟ್ಟು 2,81,468 ಮಕ್ಕಳಿಗೆ ಆರೋಗ್ಯ ಮತ್ತು ಸಮಾಲೋಚನಾ ಸೇವೆಗಳನ್ನು ಒದಗಿಸಲಾಗಿರುತ್ತದೆ |

**ಆಕುಕ 22 ಎಸ್‌ಎಂಎಂ 2023**

(ಡಾ|| ಕೆ. ಸುಧಾಕರ್)
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**